# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 68 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ(ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 04-07-2023 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

*******

| ಕ್ರ.ಸಂ | ಪ್ರಶ್ನೆ | ಸಲ್ಲಿಸಿದ ಉತ್ತರ |
|---|---|---|
| ಅ | ಮಂಡ್ಯ ಜಿಲ್ಲೆಯಲ್ಲಿರುವ ನಗರ ಯೋಜನಾ ಪ್ರಾಧಿಕಾರಗಳು ಯಾವುವು; ಸದರಿ ಪ್ರಾಧಿಕಾಗಳ ಕಾರ್ಯವ್ಯಾಪ್ತಿ ಏನು; (ಸಂಪೂರ್ಣ ವಿವರ ನೀಡುವುದು) | ಮಂಡ್ಯ ಜಿಲ್ಲೆಯಲ್ಲಿ ಒಂದು ನಗರಾಭಿವೃದ್ಧಿ ಪ್ರಾಧಿಕಾರ, ಒಂದು ಪುರಸಭೆ ಯೋಜನಾ ಪ್ರಾಧಿಕಾರ ಮತ್ತು ಒಂದು ನಗರ ಯೋಜನಾ ಪ್ರಾಧಿಕಾರ ಇರುತ್ತದೆ.<br><br>ಶ್ರೀರಂಗಪಟ್ಟಣ ಪುರಸಭೆ ಯೋಜನಾ ಪ್ರಾಧಿಕಾರ ಮತ್ತು ಮಳವಳ್ಳಿ ಯೋಜನಾ ಪ್ರಾಧಿಕಾರ ರಚಿಸಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 99 ಬೆಂರೂಪ್ರಾ 2004, ದಿನಾಂಕ:23.02.2005ರಲ್ಲಿ ಶ್ರೀರಂಗಪಟ್ಟಣ ಪುರಸಭೆ ಯೋಜನಾ ಪ್ರಾಧಿಕಾರಕ್ಕೆ ಸ್ಥಳೀಯ ಯೋಜನೆ ಪ್ರದೇಶವೆಂದು ಘೋಷಣೆಯಾಗಿರುತ್ತದೆ. ಸದರಿ ಪುರಸಭೆ ಯೋಜನಾ ಪ್ರಾಧಿಕಾರಕ್ಕೆ ಅಂತಿಮ ಮಹಾಯೋಜನೆ ಆಗಿರುವುದಿಲ್ಲ. ಅಲ್ಲದೇ, ಪ್ರತ್ಯೇಕ ನಗರ ಯೋಜನಾ ಪ್ರಾಧಿಕಾರವನ್ನು ರಚನೆಯಾಗಿರುವುದಿಲ್ಲ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 478 ಎಂಐಬಿ 09 ದಿನಾಂಕ: 03.07.2000ರಲ್ಲಿ ಮಳವಳ್ಳಿ ಯೋಜನಾ ಪ್ರಾಧಿಕಾರ ರಚಿಸಲಾಗಿರುತ್ತದೆ.<br><br>ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು 19 ಗ್ರಾಮಗಳನ್ನು ಒಳಗೊಂಡಿರುತ್ತದೆ.<br><br>ನಗರಾಭಿವೃದ್ಧಿ/ಯೋಜನಾ ಪ್ರಾಧಿಕಾರಗಳ ಕಾರ್ಯವ್ಯಾಪ್ತಿ ಈ ಕೆಳಕಂಡಂತೆ ಇರುತ್ತದೆ.<br><br>• **ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾ ಯೋಜನಾ ತಯಾರಿಕೆ:** ಯೋಜನಾ ಪ್ರಾಧಿಕಾರದ ವ್ಯಾಪ್ತಿಯೊಳಗೆ ಬರುವ ನಗರ ಮತ್ತು ಅಭಿವೃದ್ಧಿ ಪಥದಲ್ಲಿ ಇರುವ ಗ್ರಾಮಗಳ ಭೌತಿಕ, ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಿ ಮಹಾಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಮುಖಾಂತರ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವುದು ಹಾಗೂ ಅನುಷ್ಠಾನಗೊಳಿಸುವುದು.<br>• ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಸಂಬಂಧಿಸಿದ ಇಲಾಖೆ ಮತ್ತು ಸಂಸ್ಥೆಗಳಿಗೆ ತಾಂತ್ರಿಕ ನೆರವು ಮತ್ತು ಅಭಿಪ್ರಾಯ ನೀಡುವುದು. |

| | | |
|---|---|---|
| | | • ವ್ಯವಸಾಯದ ಭೂಮಿಯನ್ನು ವ್ಯವಸಾಯೇತರ ಉದ್ದೇಶಗಳಿಗಾಗಿ ಭೂ ಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ತಾಂತ್ರಿಕ ಅಭಿಪ್ರಾಯ ನೀಡುವುದು.<br>• ಭೂ ಪರಿವರ್ತನೆ ಆಗಿರುವ ಜಮೀನುಗಳಿಗೆ ವಸತಿ, ವಾಣಿಜ್ಯ, ಕೈಗಾರಿಕೆ ಮತ್ತು ಇತರೆ ಉದ್ದೇಶದ ವಿನ್ಯಾಸಕ್ಕೆ ಅನುಮೋದನೆ ನೀಡುವುದು ಮತ್ತು ಕಟ್ಟಡವನ್ನು ಕಟ್ಟಲು ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು. |
| ಆ | ಈ ನಗರ ಯೋಜನಾ ಪ್ರಾಧಿಕಾರಗಳಿಂದ ಯಾವ ಯಾವ ಪ್ರದೇಶಗಳಲ್ಲಿ ವಸತಿ ಬಡಾವಣೆಗಳನ್ನು ನಿರ್ಮಾಣ ಮಾಡಲಾಗಿದೆ; ಈ ಬಡಾವಣೆಗಳಲ್ಲಿ ಎಷ್ಟು ನಿವೇಶನಗಳನ್ನು ನಿರ್ಮಾಣ ಮಾಡಲಾಗಿದೆ; (ವರ್ಷವಾರು, ವಿಸ್ತೀರ್ಣವಾರು ಮಾಹಿತಿ ನೀಡುವುದು) | • ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆಗಳ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.<br>1) ಸಾಹುಕಾರ ಚನ್ನಯ್ಯ ಬಡಾವಣೆ 1988, ಗುತ್ತಲು ಗ್ರಾಮದ ಸ.ನಂ.480 ರಲ್ಲಿ 04ಎಕರೆ 03ಗುಂಟೆ. ಸದರಿ ಬಡಾವಣೆಯಲ್ಲಿ 93 ನಿವೇಶನಗಳನ್ನು ನಿರ್ಮಾಣ ಮಾಡಿರುತ್ತದೆ.<br>2) ಸಾತನೂರು ಬಡಾವಣೆ 1990, ಸಾತನೂರು ಗ್ರಾಮದ ಸ.ನಂ.280, 286 ರಿಂದ 289, 291/ಎ ಮತ್ತು 292 ರಲ್ಲಿ 28ಎಕರೆ 07ಗುಂಟೆ. ಸದರಿ ಬಡಾವಣೆಯಲ್ಲಿ 502 ನಿವೇಶನಗಳನ್ನು ನಿರ್ಮಾಣ ಮಾಡಿರುತ್ತದೆ.<br>3) ವಿವೇಕಾನಂದನಗರ ಬಡಾವಣೆ 1998, ಮಂಡ್ಯ ಗ್ರಾಮದ ಸ.ನಂ.507 ರಲ್ಲಿ 230ಎಕರೆ 11ಗುಂಟೆ. ಸದರಿ ಬಡಾವಣೆಯಲ್ಲಿ 2859 ನಿವೇಶನಗಳನ್ನು ನಿರ್ಮಾಣ ಮಾಡಿರುತ್ತದೆ.<br>• ಮಳವಳ್ಳಿ ಯೋಜನಾ ಪ್ರಾಧಿಕಾರದಿಂದ ಯಾವುದೇ ವಸತಿ ಬಡಾವಣೆಗಳನ್ನು ನಿರ್ಮಾಣ ಮಾಡಿರುವುದಿಲ್ಲ. |
| ಇ | ಈ ಪ್ರಾಧಿಕಾರಗಳು ಬಡಾವಣೆಗಳ ಅಭಿವೃದ್ಧಿಗಾಗಿ ಇಲ್ಲಿಯವರೆಗೆ ಕೈಗೊಂಡಿರುವ ಕ್ರಮಗಳೇನು; ವೆಚ್ಚವಾಗಿರುವ ಮೊತ್ತ ಎಷ್ಟು; (ಬಡಾವಣೆವಾರು ಮಾಹಿತಿ ನೀಡುವುದು) | • ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ವಿವೇಕಾನಂದನಗರ ಬಡಾವಣೆಗೆ ಒಳಚರಂಡಿ ಮತ್ತು ಕುಡಿಯುವ ನೀರು ಕಲ್ಪಿಸುವ ಕಾಮಗಾರಿ ಅಂದಾಜು ಮೊತ್ತ ರೂ.16.46 ಕೋಟಿ (ಈಗಾಗಲೇ ರೂ.8.36 ಕೋಟಿಗಳನ್ನು ಪಾವತಿಸಲಾಗಿರುತ್ತದೆ). ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡ್ಯ ರವರು ಗುತ್ತಿಗೆದಾರರಾದ ಮೇ॥ ಶ್ರೀ ಶುಭ ಸೇಲ್ಸ್, ಬೆಂಗಳೂರು ಇವರಿಗೆ ದಿನಾಂಕ:15-03-2022 ರಲ್ಲಿ ಗುತ್ತಿಗೆ ಒಪ್ಪಂದ ಕರಾರು ಮಾಡಿಕೊಂಡಿದ್ದು, ಗುತ್ತಿಗೆ ಮೊತ್ತ ರೂ.15.84 ಕೋಟಿಗಳಿಗೆ ಕರಾರು ಮಾಡಿಕೊಂಡಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>• ಮಳವಳ್ಳಿ ಯೋಜನಾ ಪ್ರಾಧಿಕಾರದಿಂದ ಯಾವುದೇ ವೆಚ್ಚ ಮಾಡಿರುವುದಿಲ್ಲ. |
| ಈ | ಸದರಿ ಪ್ರಾಧಿಕಾರಗಳಲ್ಲಿ ಆರ್ಥಿಕ ವರ್ಷವಾರು ಲೆಕ್ಕ ಪರಿಶೋಧನೆ ಆಗಿದೆಯೇ; ಆಗಿದ್ದಲ್ಲಿ, ಎಷ್ಟು ಮೊತ್ತ ಆಕ್ಷೇಪಣೆಗಾಗಿ ಮತ್ತು ವಸೂಲಾತಿಗಾಗಿ ಸೂಚಿಸಲಾಗಿದೆ; ಇದರಲ್ಲಿ | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿಂತೆ 1990-91 ರಿಂದ 2021-22ರವರೆಗೆ ಆರ್ಥಿಕ ವರ್ಷವಾರು ಲೆಕ್ಕ ಪರಿಶೋಧನೆ ಆಕ್ಷೇಪಣೆಗಾಗಿ ಮತ್ತು ವಸೂಲಾತಿಗಾಗಿ ಬಾಕಿ ವಿವರ ಈ ಕೆಳಕಂಡಂತಿದೆ. |

| | | |
|---|---|---|
| | ವಸೂಲಿ ಮಾಡಿದ ಮೊತ್ತ ಎಷ್ಟು? (ಸಿಬ್ಬಂದಿ/ಅಧಿಕಾರಿವಾರು ಸಂಪೂರ್ಣ ವಿವರ ನೀಡುವುದು) | <table><tr><th>ವರ್ಷ</th><th>ಆಕ್ಷೇಪಣೆ</th><th>ವಸೂಲಾತಿ</th></tr><tr><td>1990–91 ರಿಂದ 2021–22 ರವರೆಗೆ</td><td>6,42,92,001.00</td><td>34,24,170.00</td></tr><tr><td colspan="3">• **ಆಕ್ಷೇಪಣೆಯಲ್ಲಿ ರೂ.5.00 ಕೋಟಿಗಳು ಚೆಕ್ ಹಗರಣದ ಮೊತ್ತವನ್ನು ಒಳಗೊಂಡಿರುತ್ತದೆ.**</td></tr></table><br>• ಮಳವಳ್ಳಿ ಯೋಜನಾ ಪ್ರಾಧಿಕಾರದಲ್ಲಿ ಆರ್ಥಿಕ ವರ್ಷವಾರು ಲೆಕ್ಕ ಪರಿಶೋಧನೆ ಆಗಿರುತ್ತದೆ. ಆರ್ಥಿಕ ವರ್ಷವಾರು ಲೆಕ್ಕ ಪರಿಶೋಧನೆ ವಿವರವನ್ನು ಈ ಕೆಳಕಂಡ ತ:ಖ್ತೆಯಲ್ಲಿ ನೀಡಲಾಗಿದೆ.<br><table><tr><td colspan="4"></td></tr><tr><td colspan="4">2007–08 ರಿಂದ 2017–18</td></tr><tr><th>ಕ್ರ. ಸಂ.</th><th>ಅಕ್ಷೇಪಣಾ ಮೊಬಲಗು (ರೂ.ಗಳಲ್ಲಿ)</th><th>ವಸೂಲಾತಿ ಮೊಬಲಗು (ರೂ.ಗಳಲ್ಲಿ)</th><th>ಅಧಿಕಾರಿಗಳ ವಿವರ</th></tr><tr><td>1</td><td>1086883</td><td>0</td><td>• ಶ್ರೀ ಬಿ.ಎನ್.ಗಿರೀಶ್<br>• ಶ್ರೀಮತಿ ವೀಣಾ<br>• ಶ್ರೀ ಜಿ.ಎಸ್.ಜಯಸಿಂಹ<br>• ಶ್ರೀ ಆರ್.ಶೇಷ<br>• ಶ್ರೀ ಕೆ.ಬಾಲಗಂಗಾಧರ<br>• ಶ್ರೀ ರಾಜಶೇಖರ್<br>• ಶ್ರೀ ಕೆ.ಬಾಲಗಂಗಾಧರ<br>• ಶ್ರೀ ಜಿ.ಎಸ್.ಜಯಸಿಂಹ<br>• ಶ್ರೀ ಸೈಯದ್ ಜಾಫರ್</td></tr><tr><td colspan="4">2018–19 ಮತ್ತು 2019–20</td></tr><tr><td>2</td><td>1457617</td><td>908161</td><td>• ಶ್ರೀ ಸೈಯದ್ ಜಾಫರ್<br>• ಶ್ರೀಮತಿ ಎಸ್.ಲಾವಣ್ಯ</td></tr><tr><td colspan="4">2020–21 ಮತ್ತು 2021–22</td></tr><tr><td>3</td><td>1122661</td><td>585088</td><td>• ಶ್ರೀಮತಿ ಎಸ್.ಲಾವಣ್ಯ<br>• ಶ್ರೀ ಸೈಯದ್ ಜಾಫರ್<br>• ಶ್ರೀ ಆರ್.ಶೇಷ<br>• ಶ್ರೀ ಸಿ.ಲಕ್ಷ್ಮೀಶ<br>• ಶ್ರೀ ಎಸ್. ಮುರುಗಸ್ವಾಮಿ</td></tr><tr><td colspan="4"></td></tr></table> |

| | | |
|---|---|---|
| | | 2022–23<br>4 • ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತಾರೆ. ಆದರೆ ಅನುಸರಣಾ ವರದಿ ಸ್ವೀಕೃತವಾಗಿರುವುದಿಲ್ಲ.<br>• 2007–08 ರಿಂದ 2017–18ನೇ ಸಾಲಿನವರೆಗೂ ಯಾವುದೇ ವಸೂಲಾತಿ ಇರುವುದಿಲ್ಲ.<br>• 2018–19 ಮತ್ತು 2019–20 ಹಾಗೂ 2020–21 ಮತ್ತು 2021–22ನೇ ಸಾಲಿನಲ್ಲಿ ಸೂಚಿಸಿರುವ ವಸೂಲಾತಿ ಕಂಡಿಕೆಗಳಿಗೆ ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಸದಸ್ಯ ಕಾರ್ಯದರ್ಶಿಗಳಿಗೆ ಸೂಕ್ತ ವಿವರಣೆ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಿ, ತಿರುವಳಿ ಮಾಡುವ ಸಂಬಂಧ ಮಳವಳ್ಳಿ ಯೋಜನಾ ಪ್ರಾಧಿಕಾರದಿಂದ ದಿನಾಂಕ: 20.12.2022 ಮತ್ತು 31.01.2023ರಂದು ಪತ್ರಗಳನ್ನು ಬರೆದು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ನಅಇ 182 ಮೈಅಪ್ರಾ 2023(ಇ)

(ಬಿ.ಎಸ್.ಸುರೇಶ)
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು